**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ ನಂ : 35/2018**

**ಚಾ.ಸಾಃ 4, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಧರ ಹೆಗಡೆ |
| ತಂದೆಯ ಹೆಸರು | ಗಣಪತಿ |
| ವಯಸ್ಸು | 60 ವರ್ಷಗಳು |
| ಉದ್ಯೋಗ | ರೈತಾಬಿ |
| ವಾಸ್ತವ್ಯ | ಕೆರೆಕೋಣ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 13-11-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 21-12-2016 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ-2 ರವರನ್ನು ಅರೆಅಂಗಡಿಯ ಕೆಡಿಸಿಸಿ ಬ್ಯಾಂಕ್‌ಗೆ ಕರೆಸಿದ್ದು ಅಲ್ಲಿ ಎಸ್.ಕೆ. ಭಟ್ಟರು ಕೆಡಿಸಿಸಿ ಬ್ಯಾಂಕ್ ಚೆಕ್ಕನ್ನು ಕರ್ನಾಟಕ ಬ್ಯಾಂಕ್‌ನ ತಮ್ಮ ಖಾತೆಗೆ ಜಮಾಮಾಡಿಕೊಂಡ ಬಗ್ಗೆ ಪ್ರಕರಣ ದಾಖಲಾದ್ದರಿಂದ ನಮ್ಮನ್ನು ಕರೆಸಿ ಬ್ಯಾಂಕ್ ಮ್ಯಾನೇಜರರು ಹಾಜರುಡಿಸಿದ ಚೆಕ್ಕನ್ನು ಪೋಲೀಸರು ಅಮಾನತ್ತುಪಡಿಸಿಕೊಂಡು ಒಂದು ಫೋಟೋ ತೆಗೆದು ಪಂಚನಾಮೆಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-6 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಗಿದೆ. ಆ ದಿನ ಪೋಲೀಸರು ಅಮಾನತ್ತುಪಡಿಸಿಕೊಂಡ ಚೆಕ್ಕನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಿಪಿ-3 ರ ಚೆಕ್ಕನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಸ್. ಜಿ. ಹೆಗಡೆಯವರಿಂದಃ**

ಚೆಕ್ಕನ್ನು ನೋಡಿದ ಕೂಡಲೇ ಅದು ಕಳುವು ಚೆಕ್ಕು ಎಂದು ಗೊತ್ತಾಗುವುದಿಲ್ಲ. ನಿಪಿ-3 ರ ಚೆಕ್‌ನಲ್ಲಿ ಕಾರ್ಯದರ್ಶಿ ಮತ್ತು ಅಧ್ಯಕ್ಷರ ಸಹಿ ಇತ್ತು ಎಂದರೆ ಸರಿ. ಚೆಕ್‌ನ ಮೇಲೆ ಸಹಿ ಫೋರ್ಜರಿ ಆಗಿದ್ದ ಬಗ್ಗೆ ಏನೂ ಕಾಣಲಿಲ್ಲ. ಸರಿಯಾದ ರೀತಿಯಲ್ಲಿ ಚೆಕ್ಕು ನಗದೀಕರಣವಾಗಿದ್ದರೂ ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಪಂಚನಾಮೆ ಸೃಷ್ಟಿಸಲು ನಾನು ಸಹಕಾರ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**